ಸೇತುಬಂಧ - ಸಾಮರ್ಥ್ಯ ಪರೀಕ್ಷೆ ( ೮ ನೇ ತರಗತಿ ಪ್ರಥಮಭಾಷೆ ಕನ್ನಡ )

೧. ಕೆಳಗೆ ನೀಡಿರುವ ಪದಗಳಲ್ಲಿರುವ ಸ್ವರಾಕ್ಷರವನ್ನು ಮಾತ್ರ ಗುರುತಿಸಿ ಪ್ರತ್ಯೇಕಿಸಿ ಬರೆಯಿರಿ .

ಆರೋಗ್ಯ- ಇಲ್ಲಿಯವರೆಗೂ - ಅನವರತ - ಏಳುಬೀಳು - ಓಜಸ್ಸು-

ಒಲವು - ಔದಾರ್ಯ - ಊರುಭಂಗ - ಉದ್ದೇಶ- ಐರಾವತ - ಋಷಿ -

೨. ಕೊಟ್ಟಿರುವ ಪದಗಳಲ್ಲಿರುವ ವರ್ಗೀಯ ವ್ಯಂಜನಾಕ್ಷರವನ್ನು ಪತ್ತೆ ಹಚ್ಚಿ ಗೆರೆ ಎಳೆಯಿರಿ .

ಯುಗ , ಹಣ, ನರಿ, ಫಲ, ಯಾದವರು, ಶಾಪ, ರಗಳೆ, ಛಲ

೩. ಕೊಟ್ಟಿರುವ ವ್ಯಂಜನ ಮತ್ತು ಸ್ವರ ಚಿಹ್ನೆಯನ್ನು ಆಧರಿಸಿ ಗುಣಿತಾಕ್ಷರ ಬರೆಯಿರಿ .

ಕ್+ =__ ಹ್+ಾ- =_ ಜ್+ಿ = - ಸ್+ೀ=- ನ್+ು=- ಷ್+ ೂ= -

ದ್+ೃ = ವ್+ೆ= - ಲ್+ೇ= - ಗ್+ೈ= - ರ್+ೊ= - ಬ್+ೋ= - ಣ್ +ೌ

೪. ಕೆಳಗೆ ನೀಡಿದ ವಾಕ್ಯಗಳಲ್ಲಿ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ಗುರುತಿಸಿ ವಿಂಗಡಿಸಿ ಬರೆಯಿರಿ. ಉದಾ : ತಾರತಮ್ಯ = ಮ್+ಯ್ +ಅ

ಅ.ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನನ್ನು ಕಾಣಬಯಸಿದಳು .

ಆ.ಅವರು ಶಿಸ್ತುಬದ್ಧವಾದ ವ್ಯಾಯಾಮವನ್ನು ಕಲಿಯಬೇಕೆಂದು ಮನಸ್ಸಿನಲ್ಲಿಯೇ ಅಂದುಕೊಂಡರು .

೫.ರೂಢನಾಮ ,ಅಂಕಿತನಾಮ, ಅನ್ವರ್ಥನಾಮ ಗಳಿಗೆ ಐದೈದು ಉದಾಹರಣೆ ಬರೆಯಿರಿ








೬.ಕೆಳಗೆ ನೀಡಿದ ಪದಗಳಲ್ಲಿರುವ ಪ್ರತ್ಯಯ ಬರೆದು ವಿಭಕ್ತಿ ಹೆಸರಿಸಿ

ಶಾಲೆಯಲ್ಲಿ - ಮನೆಯ - ದೇವರಿಗೆ

ಕವಿತಾಳ ದೆಸೆಯಿಂದ - ಶಾಮನು - ಗುರುಗಳೇ -

ಶಾಮನನ್ನು ಮರದಿಂದ -

mamatabhagwat1@gmail.com

೭. ವಚನ ಬದಲಿಸಿ.

ನಾನು- ಅದು- ವಿದ್ಯಾರ್ಥಿನಿ – ಬಾಲಕ – ನೀವು- ಸೈನಿಕರು-

೮.ಕೊಟ್ಟಿರುವ ಪದಗಳನ್ನು ವಿಗ್ರಹಿಸಿ ಸಂಧಿ ಹೆಸರಿಸಿ.

ಎಳೆಗರು- ನೆಲವನ್ನು -

ಹೊಡೆದಾಡು- ವಿದ್ಯಾಭ್ಯಾಸ -

೯. ಬಿಟ್ಟಿರುವ ಸ್ಥಳದಲ್ಲಿ ಸರಿಯಾದ ವಿಶೇಷಣವನ್ನು ಸೇರಿಸಿ.

ಅ) ಅವನ __________ಕಣ್ಣುಗಳು ಭಯ ಹುಟ್ಟಿಸುವಂತಿದ್ದವು .

ಆ) ____________ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಭಯವಿಲ್ಲ.

ಇ)________ ಮಕ್ಕಳು ಮೈದಾನದಲ್ಲಿ ಆಟವಾಡುತ್ತಿದ್ದರು .

ಈ) ರಾಜನು __________ ಕುದುರೆಯನ್ನೇರಿ ಸಂಚಾರ ಹೊರಟನು .

( ಬಿಳಿಯ, ಜಾಣ, ಚಿಕ್ಕ, ಕೆಂಪು )

೧೦. ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಗಮನಿಸಿ ವಾಕ್ಯದ ನಡುವೆ ಬಿಟ್ಟಿರುವ ಸ್ಥಳದಲ್ಲಿ ಸರಿ ಹೊಂದುವಂತೆ ತುಂಬಿರಿ.

ದಕ್ಷಿಣ ಪಿನಾಕಿನಿ ___________ ದಂಡೆಯಲ್ಲಿ ಒಂದು ದೊಡ್ಡ __________.ಅಲ್ಲಿ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು _____. ಪ್ರತೀ ಮನೆಯಲ್ಲೂ ಅವಿಭಕ್ತ ___________. ಎಲ್ಲಾ ಮನೆಗಳಲ್ಲೂ ತುಂಬ _________. ಸುಖಕರವಾದ _____. ಜನರ ಮಧ್ಯೆ ಹಲವಾರು ____________. ಇವುಗಳ ಮಧ್ಯೆ ಮನೆಮನೆಗಳಲ್ಲಿ ಸಿಗುವ ______ ತಿನ್ನುತ್ತಾ ನಿರ್ಭೀತಿಯಿಂದ ಓಡಾಡುವ ____________. ಅವನ್ನು ಬೇಟೆಯಾಡುತ್ತಾ ಬದುಕು ಸವೆಸುತ್ತಿರುವ _______.

( ಕುಟುಂಬಗಳು , ನದಿಯ, ಬೆಕ್ಕು, ಗ್ರಾಮ, ಜನರು, ಜೀವನ, ಧಾನ್ಯ, ಸಾಕುಪ್ರಾಣಿಗಳು ,ಮನೆಗಳು ,ಇಲಿ)

೧೧.ಈ ಕೆಳಗಿನ ಚೌಕಗಳಲ್ಲಿ ನೀಡಿದ ಅಕ್ಷರಗಳ ಸಮೂಹದಲ್ಲಿ ಅಡಗಿರುವ ಶಬ್ದಗಳನ್ನು ಪತ್ತೆ ಹಚ್ಚಿ ಅವುಗಳನ್ನು ಬಳಸಿಕೊಂಡು ಸರಳ ವಾಕ್ಯ ರಚಿಸಿ .

| | | | | |
|---|---|---|---|---|
| ಸಾ | ಹ | ಸ | ಕ | ಗೆ |
| ಧ | ಸ್ತು | ನ | ಸ | ಣಿ |
| ನೆ | ಶಿ | ವಾ | ಜ | ವ |

mamatabhagwat1@gmail.com

| | | | | |
|---|---|---|---|---|
| ಬ | ಹ | ನು | ಪ | ರ |
| ಸ | ಮ | ಯ | ಜ | ಬ |

**೧೨. ಕೆಳಗೆ ನೀಡಿದ ಶಬ್ದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ವಾಕ್ಯಗಳನ್ನು ರಚಿಸಿ.**

**ಅ) ಹಿಡಿದಿದ್ದೇನೆ/ ಮಾರ್ಗವನ್ನು/ಅಹಿಂಸೆಯ**

**ಆ) ಸಹವಾಸ/ಬೆಕ್ಕಿನ /ಸಾಕು/ಇನ್ನು**

**ಇ)ಅದನ್ನು/ಅಯ್ಯೋ!/ನಂಬಬೇಡ/ಹೋಗಬಾರದು/ಬಳಿ/ಅದರ**

**ಈ) ಜೋರಾಗಿ/ಎಂದು/ಕಳ್ಳ/ಎಲ್ಲಾ/ಅರಚಿತು/ಬನ್ನಿ/ಸಿಕ್ಕಿಬಿದ್ದ**

**೧೩. ಕೆಳಗಿನ ಪದ್ಯಭಾಗದಲ್ಲಿ ಬಂದಿರುವ ಪ್ರಾಸ ಪದಗಳನ್ನು ಗುರುತಿಸಿ .**

**ಅ. ಜನ್ಮಭೂಮಿಗೆ ವಚನ ಕೊಟ್ಟು**
**ಹೋರಾಡುವ ಪಣವ ತೊಟ್ಟು**
**ದೇಶಕ್ಕಾಗಿ ಪ್ರಾಣ ಬಿಟ್ಟ ವೀರರೇ**
**ನಿಮ್ಮ ಜೀವವನ್ನೇ ಬಲಿಕೊಟ್ಟ ಶೂರರೇ**

**ಪ್ರಾಸ ಪದಗಳು :**

**ಆ . ಬಿಸಿಲು ಮಳೆಗೆಜಗ್ಗದ**
**ಚಳಿಗಾಳಿಗೆ ಕುಗ್ಗದ**
**ಬೆದರಿಕೆಗೆ ಬಗ್ಗದ ಧೀರರೇ**
**ಸ್ಥೈರ್ಯದಿಂದ ಮುನ್ನುಗ್ಗುವ ವೀರರೇ**

**ಪ್ರಾಸ ಪದಗಳು :**

**೧೪. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಪ್ರತಿ ಸಾಲಿನಲ್ಲಿ ಎಷ್ಟು ಮಾತ್ರೆಗಳಿವೆ ತಿಳಿಸಿ.**

**ಈಶನ ಕರುಣೆಯ**

**ನಾಶಿಸು ವಿನಯದಿ**

**ದಾಸನ ಹಾಗೆಯೆ ನೀ ಮನವೆ ||**

**೧೫.ಕೆಳಗಿನ ಪದ್ಯಭಾಗದ ಸಾರಾಂಶ ಬರೆಯಿರಿ.**

**ಮರಿಬೇಡ ತಾಯಿಯ ಋಣವ**

**ಮರಿಬೇಡ ತಂದೆಯ ಒಲವ**

**ಹಡೆದವರ ದೈವ ಕಣೋ**

**mamatabhagwat1@gmail.com**

ಸುಖವಾದ ಭಾಷೆಯ ಕಲಿಸೋ

ಸರಿಯಾದ ದಾರಿಗೆ ನಡೆಸೋ

ಸಂಸ್ಕೃತಿಯೇ ಗುರುವು ಕಣೋ

೧೬ .ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ .

ಒಂದು ಅಂಗಡಿಯಲ್ಲಿ ಅನೇಕ ಇಲಿಗಳಿದ್ದವು .ಅವು ಅಂಗಡಿಯಲ್ಲಿದ್ದ ಅಕ್ಕಿ , ಬೇಳೆ,ಬಾದಾಮಿ ,ಬಿಸ್ಕತ್ತು ಮುಂತಾದವನ್ನು ತಿಂದು ಕೊಬ್ಬಿದವು .ಅಂಗಡಿಯವನಿಗೆ ತುಂಬ ನಷ್ಟವಾಯಿತು.ಸಿಟ್ಟಾದ ಅವನು ಒಂದು ದೊಡ್ಡ ಬೆಕ್ಕನ್ನು ಅಂಗಡಿಗೆ ತಂದನು.ಅದು ದಿನವೂ ಒಂದೊಂದೇ ಇಲಿಗಳನ್ನು ಹಿಡಿದು ತಿನ್ನಲಾರಂಭಿಸಿತು.ಇದರಿಂದ ಚಿಂತೆಗೀಡಾದ ಇಲಿಗಳೆಲ್ಲ ಸಭೆ ಸೇರಿ ಚರ್ಚಿಸಿ ಬೆಕ್ಕನ್ನು ಓಡಿಸಬೇಕು ಎಂದು ನಿರ್ಧರಿಸಿದವು.ಆಗ ಇಲಿಗಳ ಮುಖಂಡ ಬೆಕ್ಕನ್ನು ಓಡಿಸುವುದು ಹೇಗೆ ಎಂದು ಕೇಳಿತು .ಎಲ್ಲ ಇಲಿಗಳೂ ಯೋಚಿಸಿದವು. ಆಗ ಒಂದು ಇಲಿ ಬೆಕ್ಕಿನ ಕುತ್ತಿಗೆಗೆ ಗಂಟೆಯನ್ನು ಕಟ್ಟೋಣ ,ಅದು ನಮ್ಮತ್ತ ಬರುವಾಗ ಗಂಟೆಯ ಸದ್ದಾಗುವುದು ಕೇಳಿ ನಾವು ಬಿಲದೊಳಗೆ ಓಡಬಹುದು ಎಂದು ಸೂಚಿಸಿತು .ಎಲ್ಲ ಇಲಿಗಳಿಗೂ ಈ ಸಲಹೆ ಒಪ್ಪಗೆಯಾಗಿ ಅವು ಕುಣಿದು ಕುಪ್ಪಳಿಸಿದವು .ಆದರೆ ಅನುಭವವಿರುವ ಇಲಿಯೊಂದು ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಕೇಳಿತು .ಯಾವ ಇಲಿಗಳಿಗೂ ಉತ್ತರ ತೋಚದೆ ಪೆಚ್ಚಾದವು .

ಪ್ರಶ್ನೆಗಳು :೧.ಅಂಗಡಿಯವನು ಬೆಕ್ಕನ್ನು ಅಂಗಡಿಗೆ ಕರೆತರಲು ಕಾರಣವೇನು ?

೨.ಇಲಿಗಳ ಚಿಂತೆಗೆ ಕಾರಣವೇನು?

೩.ಇಲಿಗಳು ಕುಣಿದು ಕುಪ್ಪಳಿಸಲು ಕಾರಣವೇನು ?

೪.ಇಲಿಗಳು ಏಕೆ ಪೆಚ್ಚಾದವು ?

೧೭.ಕೆಳಗಿನ ನೀಡಿದ ಚಿತ್ರಗಳನ್ನುಗಮನಿಸಿ ೧೦ ರಿಂದ ೧೫ ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ ಆದಕ್ಕೊಂದು ತಲೆಬರಹ ನೀಡಿ.



@



| | | | | |
|---|---|---|---|---|
| | | | | |
| | | | | |
| | | | | |
| | | | | |

**mamatabhagwat1@gmail.com**